**ಓ.ಎಸ್. ನಂಃ 210/2021**

**ಪಿಡಬ್ಲ್ಯೂಃ1**

**ದಿನಾಂಕಃ 13.08.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ರ ಪರ ಶ್ರೀ ಪಿ.ಡಿ ವಕೀಲರಿಂದಃ**

1. ನಾನು ಎಂ.ಟೆಕ್ ಪದವಿಧರನಾಗಿರುತ್ತೇನೆ. ದಾವಾ ಆಸ್ತಿಯು ನನ್ನ ತಂದೆಯಾದ ವಿಷಕಂಠೇಗೌಡರಿಗೆ ಅವರ ಸೋದರತ್ತೆಯಾದ ಕೆಂಪಿರಮ್ಮರವರಿಂದ ಬಂದಿದ್ದು, ನಂತರದಲ್ಲಿ ದಾವಾ ಆಸ್ತಿಯು ನನ್ನ ತಂದೆಯಿಂದ ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನೊಂದಾಯಿತ ದಾನಪತ್ರದ ಮೂಲಕ ದಾವಾ ಆಸ್ತಿಯನ್ನು ಕೆಂಪಿರಮ್ಮರವರು ನನ್ನ ತಂದೆಗೆ ದಾನವಾಗಿ ಕೊಟ್ಟಿದ್ದರು. ಸದರಿ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ದಾವಾ ಆಸ್ತಿಯನ್ನು ಕೆಂಪಿರಮ್ಮರವರು ದಾನವಾಗಿ ನನ್ನ ತಂದೆಗೆ ಕೊಟ್ಟಾ ಗ ಅದರ ವಿಸ್ತೀರ್ಣವು ಪೂರ್ವ–ಪಶ್ಚಿಮ 57 ಅಡಿ ಹಾಗೂ ಉತ್ತರ–ದಕ್ಷಿಣ 38 ಅಡಿ ಇತ್ತು.

2. ದಾವಾ ಆಸ್ತಿಯಲ್ಲಿ ನಾವು ದಾವಾ ಮನೆಯನ್ನು ಕಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಪೊಟೋವನ್ನು ತೋರಿಸಿ ಸದರಿ ಪೋಟೊವು ದಾವಾ ಆಸ್ತಿಯ ಪೋಟೋ ಎಂದು ಒಪ್ಪಿದ್ದು ಸದರಿ ಪೋಟೊವನ್ನು ನಿಡಿ.1 ಎಂದು ಗುರುತಿಸಲಾಯಿತು. ದಾವಾ ಕಟ್ಟಡವನ್ನು ಕಟ್ಟುವ ಪೂರ್ವದಲ್ಲಿ ಸಂಬಂದಪಟ್ಟ ಪ್ರಾಧಿಕಾರದಿಂದ ಕಟ್ಟಡ ಪರವಾನಿಗೆಯನ್ನು ಮತ್ತು ಅನುಮೋದಿತ ನಕಾಶೆಯನ್ನು ಪಡೆದಿರುತ್ತೇನೆ ಹಾಗೂ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ದಾವಾ ಕಟ್ಟಡವನ್ನು ಕಟ್ಟಲು 2020 ರ ಜೂನ್ ತಿಂಗಳಲ್ಲಿ ಕಟ್ಟಡ ಪರವಾನಿಗೆಯನ್ನು ಪಡೆದಿರುತ್ತೇನೆ.

3. ಸಾಮಾನ್ಯವಾಗಿ ಯಾವುದೇ ಕಟ್ಟಡವನ್ನು ಕಟ್ಟಬೇಕಾದರೆ 3 ಅಡಿ ವಿಸ್ತೀರ್ಣದ ಸೆಟ್ ಬ್ಯಾಕ್ ನ್ನು ಬಿಟ್ಟು ಕಟ್ಟಡವನ್ನು ಕಟ್ಟಬೇಕು ಎಂದು ಕಾನೂನು ಇದೆ ಎಂದರೆ ಸರಿ. ದಾವಾ ಕಟ್ಟಡವು ಅನುಮೋದಿತ ನಕಾಶೆ ಮತ್ತು ಕಟ್ಟಡ ಪರವಾನಿಗೆಯ ಪ್ರಕಾರ ಕಟ್ಟಿರುತ್ತೇನೆ ಎಂದು ಸಂಬಂದಪಟ್ಟ ಪ್ರಾಧಿಕಾರದಿಂದ ದೃಡಿಕರಣ ಪತ್ರವನ್ನು ನಾನು ಇಲ್ಲಿಯವರೆಗೂ ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಕಟ್ಟಡದ ಕಾಮಗಾರಿಯು ಇನ್ನು ಮುಗಿದಿರುವುದಿಲ್ಲವೆಂದು ಸ್ವತಃ ನುಡಿದಿರುತ್ತಾರೆ. ದಾವಾ ಕಟ್ಟಡವು ಅನುಮೋದಿತ ನಕಾಶೆ ಮತ್ತು ಕಟ್ಟಡ ಪರವಾನಿಗೆಯ

ಪ್ರಕಾರ ಕಟ್ಟಿರುತ್ತೇನೆ ಎಂದು ತೋರಿಸಲು ಸಂಬಂದಪಟ್ಟ ಪ್ರಾಧಿಕಾರದಿಂದ ದೃಡಿಕರಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

4. ಪ್ರತಿವಾದಿಯ ಮನೆ ದಾವಾ ಕಟ್ಟಡದ ಪಕ್ಕದಲ್ಲಿಯೇ ಇದೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಹಂಚಿನ ಮನೆಯ ಒಂದು ಫೋಟೋವನ್ನು ತೋರಿಸಿ ಸದರಿ ಮನೆಯು ಪ್ರತಿವಾದಿಯ ಮನೆಯಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಗುರುತಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿ ಕಾಣುತ್ತಿರುವ ದಾವಾ ಮನೆ ಮತ್ತು ಪ್ರತಿವಾದಿಯ ಮನೆಯ ಮದ್ಯೆ ಇರುವ ಖಾಲಿ ಜಾಗವು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ದಾವಾ ಕಟ್ಟಡ ಮತ್ತು ಪ್ರತಿವಾದಿಯ ಮನೆಯ ಮದ್ಯೆ ಇರುವ ಖಾಲಿ ಜಾಗ ನನಗೆ ಸೇರಿದ್ದು ಎಂದು ನಾನು ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿ ಹದ್ದುಬಸ್ತನ್ನು ಮಾಡಿಸಿರುತ್ತೇನೆ. ಪಂಚಾಯಿತಿಯವರು ಹದ್ದುಬಸ್ತು ಮಾಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. 2021 ರಲ್ಲಿ ಪಂಚಾಯಿತಿಯವರು ದಾವಾ ಕಟ್ಟಡ ಮತ್ತು ಪ್ರತಿವಾದಿಯ ಮನೆ ಮದ್ಯೆ ಇರುವ ಜಾಗವನ್ನು ಹದ್ದು ಬಸ್ತು ಮಾಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಕೆ.ಆರ್.ನಗರ.